# ಮಕರಂದ

KVSMHS Kurudapadavu

# ಬಾನ ಹಕ್ಕಿ

ಬಾನ  ನೀಲಿಯಲಿ ತೇಲುತ್ತಾ ಹಕ್ಕಿ
ಎತ್ತಲೋ ಹಾರುತಲಿತ್ತು
ಹುಡುಕುತಿತ್ತೇನನೋ
ಕೆಳಗೆ ನೋಡಿ

ತಿಳಿ ಗುಲಾಬಿ ರಂಗಿನ
ಹೊಚ್ಚ ಹೊಸ ಅಂಗಿ
ಕಾಣಿಸಿದ್ದೇ ತಡ
ತೂರಿಕೊಂಡಿತು ಹಾಗೇ
ಮೆತ್ತಗೆ ಇಳಿದು ಬಂದು

ಹೊಕ್ಕ ಮೇಲೆ
ಹಿತವೆನಿಸಲಿಲ್ಲವೆಂದೋ
ಇದು ತನ್ನದಲ್ಲವೆಂದೋ ಆ
ಮನಸಿಗೆ ಕಸಿ ವಿಸಿ
ಮತ್ತೆ ಹೊರಬರಬೇಕೆಂದರೆ ಹೇಗೆ ?
ಎಲ್ಲಿದೆ ತೆರಳುವ ದಾರಿ ?

ಮರುಗಿದೆ
ಅತ್ತು ಚಡಪಡಿಸಿದೆ .
ಅಳುತ್ತಾ ಗೋಳಾಡಿದೆ .
ಬಂಧಿಯಾದ ಹಕ್ಕಿಯೀಗ
ಸುಮ್ಮನಾಗಿದೆ ಕೊನೆಗೆ
ಬಿಡುಗಡೆ ಹಾದಿಕಾಣದೆ .

ದೀಕ್ಷಾ .ಪಿ
೮ "ಬಿ "

# ಮುದುಡಿ ಬಿರಿದ ಹೊಂದಾವರೆ

ನಡುರಾತ್ರಿಯಲ್ಲಿ  ಕಾಲಿಂಗ್ ಬೆಲ್ ನ ಸದ್ದು ಕೇಳಿ ದಂಪತಿಗೆ ಎಚ್ಚರವಾಯಿತು . ಇಬ್ಬರನ್ನೂ ಏನೋ ಒಂದು ಅವ್ಯಕ್ತ ಭಯ ಆವರಿಸಿತು . ನಿನ್ನೆಯ ದಿನವನ್ನು ನೆನೆದು ಇಬ್ಬರೂ ನಡುಗಿದರು . ಬಾಗಿಲು ತೆರೆಯಲು ಇಬ್ಬರೂ ಹೋದರು . ರಾಯರು ಮುಂದೆ ಮೆಲ್ಲ ಮೆಲ್ಲ ನಡೆಯುತ್ತಾ ಬಾಗಿಲನ್ನು ತೆರೆದರು . ಸುಂದರಮ್ಮ ಅವರ ಹಿಂದೆ ಇದ್ದರು . ಬಾಗಿಲು ತೆರೆದ ಕೂಡಲೇ ಇಬ್ಬರೂ ಸ್ತಂ ಭೀಭೂತರಾದರು . ಇಬ್ಬರ ತುಟಿಯೂ ಒಣಗಿತು . ಎದುರು ಬಾಗಿಲ ಮುಂದೆ ಒಬ್ಬ ಧಡೂತಿ ಪೊಲೀಸ್ ನಿಂತಿದ್ದ. ಅವನ ಹಿಂದೆ ಇಬ್ಬರು ಸಹಾಯಕ ಪೋಲೀಸರು . ಪೊಲೀಸನ ಕೈಯಲ್ಲಿ ಒಂದು ಲಾಠಿ ಇತ್ತು . ಅದನ್ನು ಬಲಕೈಯಲ್ಲಿ ಹಿಡಿದು ಎಡಗೈಗೆ ಸವರುತ್ತಾ ದಂಪತಿಗಳನ್ನು ಸಂಶಯದ ದೃಷ್ಟಿಯಲ್ಲಿ ನೋಡುತ್ತಾ ನಿಂತಿದ್ದ . ರಾಯರ ಬಾಯಿಂದ ಎಷ್ಟು ಪ್ರಯತ್ನಿಸಿದರೂ 'ಏನು ಬೇಕಾಗಿತ್ತು ?ಎಂದು ಕೇಳಲು ಕೂಡ ಆಗಲಿಲ್ಲ .

ಅದೊಂದು ದೊಡ್ಡ ಬಂಗಲೆ . ಅಲ್ಲಿ ನರಸಿಂಹ ರಾಯರು ಮತ್ತು ಅವರ ಪತ್ನಿ ಸುಂದರಮ್ಮನವರು ವಾಸವಾಗಿದ್ದರು . ಅವರಿಗೆ ಇಬ್ಬರು ಮಕ್ಕಳು ಅವ್ನಿ ಮತ್ತು ಅಗ್ನೇಶ್ . ರಾಯರಿಗೆ ಹೆಣ್ಣು ಮಕ್ಕಳಲ್ಲಿ ಪ್ರೀತಿ ಹೆಚ್ಚಾಗಿರುವುದರಿಂದ ಅವರು ಅವ್ನಿಯನ್ನು ಹೆಚ್ಚು ಪ್ರೀತಿಸುತ್ತಿದ್ದರು. ಹಾಗೆ ಅಗ್ನೇಶ್ ನಲ್ಲಿ ಕಡಿಮೆ ಎಂದಲ್ಲ .   ಅವ್ನಿಯಷ್ಟು ಇಲ್ಲ . ರಾಯರಿಗೆ ಸುಮಾರು ತೋಟ ಇತ್ತು. ಪಿತ್ರಾರ್ಜಿತವಾಗಿ ಸಿಕ್ಕಿದ ಸಂಪತ್ತು ಇತ್ತು . ಊರಿನಲ್ಲಿ ದೊಡ್ಡ ಸಾಹುಕಾರ. ಸಾಹುಕಾರನ ಮಕ್ಕಳಾದ ಅವ್ನಿ ಮತ್ತು ಅಗ್ನೇಶ್ ಗೆ ಊರಲ್ಲಿ ತುಂಬಾ ಗೌರವ ಇತ್ತು . ತಂದೆಯ ಅತಿ ಪ್ರೀತಿ ,ಊರಿನಲ್ಲಿ ಗೌರವ , ಸಾಲದಕ್ಕೆ ಅವರಿಗೆ ಕೈತುಂಬಾ ಹಣ ,ಏನು ಕೇಳಿದಾಗಲೂ ಇಲ್ಲ ಎನ್ನದ ತಂದೆ . ಇಷ್ಟು ಸಾಲದೇ ? ಇದೆಲ್ಲವೂ ಅವರನ್ನು ಸ್ವರ್ಗಸುಖಿಗಳನ್ನಾಗಿಸಿತ್ತು . ಹಾಗೆ ಯಾವುದೇ ಕುಂದು ಕೊರತೆಗಳಿಲ್ಲದೆ ಸಾಗುತ್ತಿದ್ದ ಅವರ ಬದುಕ ಬಂಡಿ ತಕ್ಷಣ ತನ್ನ ದಿಶೆಯನ್ನು ಬದಲಾಯಿಸಿತು .. ಎಲ್ಲರಿಂಗೂ ಆಶ್ಚರ್ಯ ಆಗುವ ಹಾಗೆ .. ಏನಾಯಿತು ? ಯಾಕೆ ಹೀಗಾಯಿತು ?

ಅದೊಂದು ಮಟ ಮಟ  ಮಧ್ಯಾಹ್ನ . ಶಾಲೆಯಿಂದ ರಾಯರ ಮನೆಗೆ ಫೋನ್ ಬಂದಿತು . "ತಮ್ಮ ಮಗನ ಬ್ಯಾಗಿನಲ್ಲಿ ಗಾಂಜಾವು ಸಿಕ್ಕಿದೆ . ನೀವು ಬೇಗ ಶಾಲೆಗೆ ಬನ್ನಿ " ಇಷ್ಟು  ಹೇಳಿ ಅವರು ಕಟ್ ಮಾಡಿದರು. ರಾಯರ ಮನಸ್ಸು ಒಡೆದ ಹಾಗಾಯಿತು . ಅವರು ಪತ್ನಿ ಸುಂದರಮ್ಮನವರಿಗೆ ತಿಳಿಸಿದರು . ಅವರು ನಿಂತಲ್ಲೇ ಕಲ್ಲಾದರು . ಇಬ್ಬರೂ ಸಾವರಿಸಿಕೊಂಡು ಶಾಲೆಗೆ ಧಾವಿಸಿದರು . ಆಫೀಸ್ ಕೊಠಡಿಯಲ್ಲಿ ಮಗ ಅಗ್ನೇಶ್ ತಲೆ ತಗ್ಗಿಸಿ ನಿಂತಿದ್ದ. ಹೆಡ್ಮಿಸ್ಟ್ರೆಸ್ ಬ್ಯಾಗ್ ಹಿಡಿದು ಅವನಲ್ಲಿ ಪ್ರಶ್ನೆ ಕೇಳ್ತಾ ಇದ್ದರು . ರಾಯರು ಬಂದದ್ದನ್ನು ನೋಡಿ ಅವರು ಬೈಯುವುದನ್ನು ನಿಲ್ಲಿಸಿ ರಾಯರ ಬಳಿಗೆ ಬಂದು ಬ್ಯಾಗನ್ನು ತೆರೆದು ತೋರಿಸಿದರು . ರಾಯರು ಬ್ಯಾಗನ್ನು ನೋಡಿ ಮಗನ ಬಳಿಗೆ ಬಂದರು ಅವರು ಹೊಡೆಯಲು ಕೈಎತ್ತಿದಾಗ ಸುಂದರಮ್ಮನವರು ತಡೆದರು . ಮುಖ್ಯೋಪಾಧ್ಯಾಯಿನಿ ಏನೂ ಹೇಳದೆ ಟಿ.ಸಿ ಗೆ ಕೆಂಪು ಸೈನ್ ಹಾಕಿ ರಾಯರಲ್ಲಿ ಕೊಟ್ಟು "ಕ್ಷಮಿಸಿ ಇಲ್ಲಿ ಸಾಧ್ಯವಿಲ್ಲ "ಎಂದು ಹೇಳಿದರು . ರಾಯರು ಭಾರವಾದ ಹೃದಯದಿಂದ ಪತ್ನಿ ಜೊತೆ ಮನೆಗೆ ಹೊರಟರು . ಅವರ ಹಿಂದೆ ಅಗ್ನೇಶ್ ಅಳುತ್ತಲೇ ಮನೆಗೆ ಹೊರಟ . ಆದರೆ ಅವನಿಗೆ ತನ್ನ ಬಗ್ಗೆ ನಾಚಿಕೆ ಆಯಿತು . ಇನ್ನು ಈ ಊರಲ್ಲಿರುವುದು ಸರಿ ಅಲ್ಲ ಎಂದು ಬೇರೆಲ್ಲಿಗೋ ಹೋರಟ. ರಾಯರು ಅವನನ್ನು ಹುಡುಕಲು ಹೋಗಲಿಲ್ಲ. ಮರುದಿನ ರಾತ್ರಿಯಾಗಿತ್ತು. ಪೊಲೀಸ್ ಇವರ ಮನೆಗೆ ಬಂದಿದ್ದು. ಪೊಲೀಸ್ ಅಧಿಕಾರಿಯು ರಾಯರ ಬಳಿ ಬಂದು ನಿಮ್ಮ ಮಗನೆಲ್ಲಿ"?. ಎಂದು ನೇರವಾಗಿ ಪ್ರಶ್ನಿಸಿದ . ರಾಯರು ಗೊತ್ತಿಲ್ಲವೆಂಬಂತೆ ತಲೆಯಾಡಿಸಿದರು. ಆ ಪೊಲೀಸ್ ರಾಯರ ಭುಜಹಿಡಿದು ಸೋಫಾದಲ್ಲಿ ಕುಳ್ಳಿರಿಸಿದ. ಅವರೆದುರಿಗೆ ಕುಳಿತ ಸುಂದರಮ್ಮನವರು ರಾಯರ ಬಳಿಬಂದು ನಿಂತರು . ಪೊಲೀಸ್ ನಿಟ್ಟುಸಿರು ಬಿಟ್ಟು ಹೇಳಿದರು"ರಾಯರೇ ಜಗತ್ತಿನಲ್ಲಿ ಒಳ್ಳೆಯ ಗುಣ ಏನುಗೊತ್ತಾ ?ಕ್ಷಮೆ . ಯಾಕೆಂದರೆ ಕ್ಷಮೆ ಏನನ್ನೂ ಉಳಿಸಬಹುದು . ಯಾರ ಭವಿಷ್ಯವನ್ನೂ

ಬದಲಾಯಿಸಬಹುದು . ಏನಂತೀರಾ ?ರಾಯರಿಗೆ ಅವನ ಮಾತಿನ ಮರ್ಮ ತಿಳಿಯಿತು . ಅವರು ಏನೂ ಹೇಳದೆ ಸುಮ್ಮನೆ ಕುಳಿತಿದ್ದರು. ಸ್ವಲ್ಪ ಹೊತ್ತು ಕಳೆದು "ನೀವು ಏತಕ್ಕಾಗಿ ಬಂದಿದ್ದೀರಿ ?ನಿಮ್ಮ ಉದ್ದೇಶವೇನು ?ಎಂದು ಕೇಳಿದರು . ಪೊಲೀಸ್ ಜೋರಾಗಿ "ಅಗ್ನೇಶ್"ಎಂದು ಕರೆದ. ಅವನು ಮೆಲ್ಲನೆ ತಲೆತಗ್ಗಿಸುತ್ತ ಬಂಡ .ರಾಯರು ತಟ್ಟನೆ ಎದ್ದು ನಿಂತು ತನ್ನ ಸೊಂಟಕ್ಕೆ ಸಿಕ್ಕಿಸಿದ್ದ ಬಂದೂಕು ತೆಗೆದರು ."ದುಷ್ಟ ನನ್ನ ಮನ ಮರ್ಯಾದೆ ತೆಗೆದೆ . ಇನ್ನು ಏನು ಪ್ರಾಣ ತೆಗೆಯಲು ಬಂಡೆಯ"?ಎಂದು ಕೇಳಿದರು . ಅಗ್ನೇಶ್ ತಲೆ ತಗ್ಗಿಸಿ ನಿಂತ , ರಾಯರು ತನ್ನ ಬಂದೂಕು ಎಸೆದು ಮಗನ ಬಳಿ ಬಂದರು . ಅವನನ್ನು ಅಪ್ಪಿ ಹಿಡಿದರು . ಇದೆಲ್ಲವನ್ನೂ ನೋಡುತ್ತಿದ್ದ ಎಲ್ಲರೂ ಸಂತೋಷದ ನಿಟ್ಟುಸಿರು ಬಿಟ್ಟರು . ಮರೆಯಲ್ಲಿ ನಿಂತು ಇದನ್ನು ನೋಡುತ್ತಿದ್ದ ಅವ್ನಿಯೇ ತನ್ನ ಉಪಾಯ ಫಲಿಸಿದ್ದನ್ನು ನೋಡಿ ನಿಟ್ಟುಸಿರು ಬಿಟ್ಟಳು . ಜೊತೆಗೆ ತನ್ನ ಪ್ರಿಯತಮನ ಬುದ್ಧಿವಂತಿಕೆ ನೋಡಿ ಸಂತೋಷವಾಯಿತು . ತನ್ನ ಪ್ರೀತಿಯ ಬಗ್ಗೆ ಹೇಳುವ ಸುಸಮಯ ಇಡೀ ಎಂದು ಭಾವಿಸಿ ಓದಿ ಬಂದು ತಂದೆಯನ್ನು ನೋಡಿ ನಕ್ಕಳು . ಪಪ್ಪಾ ಆಮ್ ಸಾರೀ ,ಈ ಪೊಲೀಸ್ ನನ್ನ ಲವರ್ ನಿಮಗೆ ... "ಎಂದು ತಲೆ ತಗ್ಗಿಸಿ ನಿಂತಳು . ರಾಯರು ಅವಳ ಕೈಹಿಡಿದು ಪೊಲೀಸ್ ನ ಕೈಗೆ ಕೊಟ್ಟರು . ಕ್ಷಮೆ ನೀಡುವುದು ಅಂತ ಕೇಳಿದ್ದೇವೆ . ನೀಡಿದ್ದೇವೆ . ಇದೆಂತಹ ಕ್ಷಮೆ ?

ರಚನೆ ಖದೀಜತ್ ತ್ರಿಹ . ಎ
೧೦ 'ಎ "

# ನಾನೊಂದು ಹಕ್ಕಿಯಾಗಿದ್ದರೆ

ನಾನೊಂದು ಹಕ್ಕಿಯಾಗಿದ್ದರೆ
ಸಂತಸದಿಂದ ಆಗಸದಲ್ಲಿ ಹಾರಾಡುತ್ತಿದ್ದೆ
ಈ ಕ್ರೂರ ಮನಸ್ಸಿನ ಜೊತೆಯಲ್ಲಿ ಬದುಕುವ
ಬದಲು ಮುಗ್ಧ ಮನಸ್ಸಿನ ಜೊತೆ ಬದುಕುತ್ತಿದ್ದೆ.

ನಾನೊಂದು ಹಕ್ಕಿಯಾಗಿದ್ದರೆ
ಮರಗಿಡಗಳಿಗೆ ಪ್ರಿಯವಾಗುತ್ತಿದ್ದೆ
ಆದರೆ ಈಗ ನಾ ಮಾನವನ ಮಧ್ಯೆ
ದ್ವೇಷದ ಕೊಂಡಿಯಾಗಿ ಬೆಳೆದೆ.

ನಾನೊಂದು ಹಕ್ಕಿಯಾಗಿದ್ದರೆ
ಪುಟ್ಟದೊಂದು ಗೂಡನ್ನು ಕಟ್ಟಿ ಸಂತಸದಿಂದಿರುತ್ತಿದ್ದೆ
ಆದರೆ ಈಗ ದೊಡ್ಡ ಅರಮನೆಯನ್ನು
ಕಟ್ಟಿ ಒತ್ತಡದ ಜೀವನದಲ್ಲಿ ಬಂಧಿತನಾಗಿರುವೆ.

ಇನ್ನೊಂದು ಜನ್ಮವಿದ್ದರೆ ನಾ ಹಕ್ಕಿಯಾಗಿ
ಹುಟ್ಟಿಬಂದು ಪರೋಪಕಾರವೆಂಬ ಧರ್ಮದಲ್ಲಿ
ಅತ್ತಿಂದಿತ್ತ ಇತ್ತಿಂದತ್ತ ಹಾರಾಡುತ್ತಾ
ಮನುಷ್ಯರಿಗೆ ಪ್ರಿಯವಾಗುವೆ.

ರಚನೆ:- ಸಿ.ಜಿ. ಶಶಾಂಕ್ ಆಳ್ವ
10 B ತರಗತಿ

# ಹಕ್ಕಿಯ ಜೀವನ

ಕಾವು ಕೊಟ್ಟ ತಾಯಿ ಹಕ್ಕಿ
ಮರಿಗಾಗಿ ಹಂಬಲಿಸುತಿದೆ
ಮೊಟ್ಟೆಯೊಡೆದು ಜಗಕಂಡ ಮರಿಹಕ್ಕಿ
ತಾಯಿ ಪ್ರೀತಿಯನು ಅರಸುತಿದೆ.

ಬೆಳಗಾಗುವ ಮುನ್ನ ಆಹಾರಕ್ಕಾಗಿ
ತಾಯಿ ಹಕ್ಕಿ ಗೂಡುಬಿಟ್ಟಿದೆ
ಮರಿಯ ರಕ್ಷಣೆಗಾಗಿ
ತನ್ನ ಬಳಗವ ಕರೆದಿದೆ.

ಕೊಕ್ಕಿನಿಂದ ಕೊಕ್ಕಿಗೆ ಆಹಾರನೀಡಿ
ಮರಿಯನು ಪೊಷಿಸುತಿದೆ
ಕಿರಿದಾದ ರೆಕ್ಕೆಗಳು ಮೂಡಿ
ಪುಲಕದಿ ಬಾಣೆತ್ತರಕೆ ಹಾರಾಡುತಿದೆ.

ಮಾನವರು ಸ್ವಾರ್ಥ ಬಿಡದೆ
ಬದಲಾವಣೆಗಳನು ತರುತ್ತಿದ್ದಾರೆ
ಕವಿಯ ಮನದಲಿ ಅವಿತುಕೊಂಡಿದೆ
ನಾನೊಂದು ಹಕ್ಕಿಯಾಗಿದ್ದರೆ.

ರಚನೆ:- ನವ್ಯ.ಶ್ರೀ
10 B ತರಗತಿ

# ಗುಪ್ತ ಬದುಕು

ನಾನೊಂದು ಹಕ್ಕಿಯಾಗಿದ್ದರೆ
ಹಾರುತಿದ್ದೆ ಮುಗಿಲೆತ್ತರಕ್ಕೆ
ಕಿರು ರೆಕ್ಕೆ ಬಡಿದು,ಇರು ಕಣ್ಣಿನಿಂದ
ನೋಡುತ್ತಿದ್ದೆ ಇಳೆಯ ಅಂದವ

ನಾನೊಂದು ಹಕ್ಕಿಯಾಗಿದ್ದರೆ
ಆಗುತ್ತಿದ್ದೆ ಮರದ ಸಾಟಿ
ಪುಟ್ಟ ಗೂಡಲಿ, ಒಂಟಿ ಕೂಗಲಿ
ಹಾಡುತ್ತಿದ್ದೆ, ನಲಿದಾಡುತ್ತಿದ್ದೆ.

ನಾನೊಂದು ಹಕ್ಕಿಯಾಗಿದ್ದರೆ
ಹಲವು ಬಣ್ಣವ ಪಡೆಯುತ್ತಿದ್ದೆ
ಹಲವು ತಾಣವ ನೋಡುತ್ತಿದ್ದೆ
ಮನವ ಬಿಚ್ಚಿ ಹಾರುತ್ತಿದ್ದೆ.

ನಾನೊಂದು ಹಕ್ಕಿಯಾಗಿದ್ದರೆ
ಶರಣಾಗುತ್ತಿರಲಿಲ್ಲ ಸ್ವಾರ್ಥ ಸೇವೆಗೆ
ಬಲಿಯಾಗುತ್ತಿರಲಿಲ್ಲ ಕೆಟ್ಟ ಕಾರ್ಯಕೆ
ಭಾರವಾಗುತ್ತಿರಲಿಲ್ಲ ಯಾರ ಪಾಲಿಗೆ.

ನಾನೊಂದು ಹಕ್ಕಿಯಾಗಿದ್ದರೆ
ಶಶಿಯೊಡನೆ ಕಥೆಯ ಹೇಳುತ
ಮಕ್ಕಳೊಡನೆ ಆಟ ಆಡುತ
ಜನರ ಪ್ರಶಂಸೆ ಪಡೆಯುತ್ತಿದ್ದೆ.

ನಾನೊಂದು ಹಕ್ಕಿಯಾಗಿದ್ದರೆ
ನಾಲ್ಕು ದಿನದಲಿ ಸುಖದಿ ಸಾಗಿ
ಯಾರು ತಿಳಿಯದೆ ಮಣ್ಣು ಸೇರಿ
ಅಗಲುತ್ತಿದ್ದೆ ಸುಖದ ಹಾದಿ.

# ಬೆಳದಿಂಗಳ ರಾತ್ರಿ

ಸೂರ್ಯಸ್ತಮಾನವ ಕಳೆದು
ಮೂಡುತ್ತಿದೆ ನೋಡಲ್ಲಿ
ಇರುಳಿನ ಮಸುಕನ್ನು ಹೊಡೆದು
ನಗುಮುಖವನೊಂದಿದ ಚಂದ್ರನಲ್ಲಿ

ಮೌನವಾದ ಜಗತಿನಲಿ
ತಂಗಾಳಿಯು ಬೀಸುತಿದೆ
ಮನದಲಿ ಉಲ್ಲಾಸವಾಗುತಲಿ
ಬೆಳದಿಂಗಳನು ಚೆಲ್ಲುತಿದೆ

ಮೋಡಗಳಂಚಿನಲಿ ಮರೆಮಾಸುತ
ತಾರೆಗಳೆಡೆಯಲಿ ಇಣುಕುತಿರಲು
ಕಣ್ಣಿಗೆ ಆಕರ್ಷಣೆಯಾಗುತ
ಬೆಳ್ಳಿ ತಟ್ಟೆಯಂತೆ ಮಿನುಗುತಿರಲು

ಅದ್ಭುತವಾದ ಸಮಯದಲಿ
ದುಃಖದ ಮನವು ಅರಳುತಿದೆ
ಮಗುವಿನ ಅಳುವನು ಕೇಳುವಲಿ
ಸಂಭ್ರಮವನು ನೀಡುತಿದೆ.

ರಚನೆ:- ನವ್ಯ.ಕೆ
10 B ತರಗತಿ

# ರಮಾಳ ಸೋಲು

ಒಂದು ಪುಟ್ಟ ಹಳ್ಳಿ ಸುಂದರವಾದ ಆ ಪ್ರಕೃತಿ ರಮಣೀಯ ಸ್ಥಳದಲ್ಲಿ ರಮ ಎಂಬಾಕೆ ಪುಟ್ಟ ಗುಡಿಸಲಿನಲ್ಲಿ ವಾಸಿಸುತ್ತಿದ್ದಳು. ಆದರೆ ಆ ಪ್ರದೇಶ ಸ್ವಲ್ಪ ಭಯವನ್ನುಂಟು ಮಾಡುತ್ತಿತ್ತು. ಯಾಕೆಂದರೆ ಆ ಗುಡಸಲಿನ ಸುತ್ತಮುತ್ತಲು ದಟ್ಟವಾದ ಅರಣ್ಯವು ಬೆಳೆದಿತ್ತು. ಆದ ಕಾರಣೀ ಅರಣ್ಯವು ಸ್ವಲ್ಪ ಭಯವನ್ನುಂಟುಮಾಡುತ್ತಿತ್ತು. ಆದರೆ ರಮ ಧೈರ್ಯದಿಂದ ಒಂಟಿಯಾಗಿ ವಾಸಿಸುತ್ತಿದ್ದಳು.

ಒಂದು ದಿವಸ ರಮ ನೀರು ತರಳೆಂದು ಹತ್ತಿರದಲ್ಲಿರುವ ಕೊಳದ ಕಡೆಗೆ ಹೆಜ್ಜೆಯನ್ನಿಟ್ಟಳು. ತನ್ನ ಕೊಡದ ಮೂಲಕ ನೀರು ಶೇಖರಿಸಲು ಬಾಗಿ ಕೊಳಕ್ಕೆ ಮುಲುಗಿಸಿದಾಗ ಆಕಸ್ಮಿಕವಾಗಿ ಕಾಲು ಜಾರಿ ರಮ ಕೊಳಕ್ಕೆ ಬಿದ್ದುಬಿಟ್ಟಳು. ಕಷ್ಟ ಪಟ್ಟು ರಮ ದಡವನ್ನು ಸೇರಿದಳು. ಆದರೆ ಅವಳು ತುಂಬಾ ಹೆದರಿದ ಕಾರಣ ಕೈಕಾಲುಗಳು ನಡುಗತೊಡಗಿತ್ತು. ನಂತರ ಹೆದರಿಕೆ ಇಂದ ಮನೆಯ ಕಡೆ ಹೆಜ್ಜೆ ಹಾಕಿದಳು ರಮ. ತನ್ನ ಹೆದರಿಕೆ ಮಾತ್ರ ರಾತ್ರಿಯ ಹೊತ್ತು ಇಮ್ಮಡಿಯಾಗಿತ್ತು. ಯಾಕೆಂದರೆ ಒಬ್ಬಂಟಿಯಾಗಿ ವಾಸಿಸುತ್ತಿದ್ದ ರಮಳಿಗೆ ಧೈರ್ಯತಂದುಕೊಡಲು ಯಾರು ಜೊತೆಗಿರಲಿಲ್ಲ. ಆ ದಿವಸ ರಾತ್ರಿ
ಜೋರಾದ ಗಾಳಿ ಮಳೆ ಸುರಿಯಿತು. ಮೊದಲೆ ಹೆದರಿದ್ದ ರಮಳ ಹೆದರಿಕೆ ತೀವ್ರವಾಯಿತು. ಗಾಳಿಯು ಜೋರಾಗಿ ಬೀಸುತ್ತಿದುದ್ದರಿಂದ ರಮಳ ಪುಟ್ಟ ಗುಡಿಸಲು ಆಗ ಬೀಳುತ್ತದೋ ಅಲ್ಲ ಈಗ ಬೀಳುತ್ತದೋ ಎಂಬ ಹಂತದಲ್ಲಿತ್ತು. ರಮ ಧೈರ್ಯ ತಂದು ಕೊಟ್ಟು ಗುಡಿಸಲಿನಿಂದ ಹೊರಕ್ಕೆ ನಡೆದು ಒಂದು ಮರದಡಿಯಲ್ಲಿ ನಿಂತು ಬಿಟ್ಟಳು. ರಮ ನೋಡನೋಡುತ್ತಲೆ ಗುಡಿಸಲು ದಿಢೀರ್ ಎಂದು ಕುಸಿಯಿತು. ರಮ ಬೇಸರದಿಂದ ಅದನ್ನು ನೋಡುತ್ತಲೆ ಕಲ್ಲಾಗಿ ಬಿಟ್ಟಳು. ಆದರೆ ಈಗ ರಮಳಿಗೆ ಸಮಾಧಾನ
ಪಡಿಸಲೋ ಅಥವಾ ಧೈರ್ಯ ತಂದುಕೊಡಲು ರಮಳ ಜೊತೆಗೆ ಯಾರು ಇಲ್ಲ. ಅದು ಕೂಡ ಮಧ್ಯರಾತ್ರಿಯ ಹೊತ್ತು ಒಬ್ಬಂಟಿಯಾಗಿ ರಮ ಆ ಬೃಹತ್ ಗಾತ್ರದಲ್ಲಿ ಬೆಳೆದ ಮರವನ್ನೇ ಆಶ್ರಯಿಸಿದ ರಮ ಬೆಳಗಿನ ತನಕ ಮರದ ಕೆಳಗೆ ನಿದ್ರಿಸಿದಳು.

ಮರುದಿವಸ ರಮ ತನ್ನ ಪುಟ್ಟ ಗುಡಿಸಲಿನ ಕಡೆಗೆ ಹೆಜ್ಜೆಯನ್ನಿಟ್ಟಾಗ ಗುಡಿಸಲಿನ ಅವಶೇಷಗಳ ಎಡೆಯಲ್ಲಿ ಸಿಲುಕಿಕೊಂಡು ತೀರಿಹೋದ ತನ್ನ ತಂದೆ ತಾಯಿಯವರ ಭಾವಚಿತ್ರ ಸಿಕ್ಕಿತ್ತು. ಅದನ್ನು ಮೆಲ್ಲನೆ ಮೇಲಕ್ಕೆತ್ತಿ ನೋಡುತ್ತಲೇ ಹೀಗೆಂದಳು:"ಅಮ್ಮ ನನಗೆ ಸಾಕಾಯಿತು ಅಮ್ಮ ಈ ಬದುಕು. ನಾನು ಕೂಡ ನಿಮ್ಮ ಜೊತೆಗೆ ಬರುತ್ತೇನೆ. ಅಪ್ಪ ನನ್ನನ್ನು ಕೂಡ ಪ್ರೀತಿಯಿಂದ ತಾವಿರುವ ಕಡೆಗೆ ಸ್ವಾಗತಿಸು" ಎಂದು ಹೇಳಿ ಕೊಂಡು ಹಂಚಿನ ಒಂದು ತುಂಡನ್ನು ಎತ್ತಿಕೊಂಡು ತನ್ನ ಹೊಟ್ಟೆಗೆ ಬಲವಾಗಿ ಬೀಸತೊಡಗಿದಾಗ ರಮ ಅಲ್ಲೇ ಕೊನೆ ಉಸಿರನ್ನು ಎಳೆದಳು.

ನೀತಿ:-ನಾವು ಬದುಕಿನಲ್ಲಿ ಸೋತು ಹೋದೆವು ಎಂದು ಮರಣದ ಕಡೆಗೆ ಗಮನ ಹರಿಸುವ ಬದಲು ಗೆಲುವಿನ ಕಡೆಗೆ ಹರಿಸಬೇಕು.

ರಚನೆ:-ಸಿ.ಜಿ ಶಶಾಂಕ್ ಕುಮಾರ್ ಆಳ್ವ

# ಪಂಜರದಿಂದ ಗಿಳಿಗೆ ಬಿಡುಗಡೆಯಾಯಿತೇ ?

ಮಗಳ ಒತ್ತಾಯಕ್ಕೆ ಮಣಿದು ಅವರು ಆ ಮನೆಯನ್ನು ಖರೀದಿಸಿದ್ದರು. ಯಾಕೆ ಅವಳು ಆ ಮನೆಗಾಗಿ ಹಠ ಹಿಡಿದಳೆಂದು ಇಬ್ಬರಿಗೂ ಅರ್ಥವಾಗಲಿಲ್ಲ. ಅವಳಿಗೂ ತನಗ್ಯಾಕೆ ಆ ಮನೆ ಅಷ್ಟು ಇಷ್ಟವಾಯಿತೆಂದು ತಿಳಿಯಲಿಲ್ಲ. ಪದ್ಮಮ್ಮ ಮಗಳನ್ನು ಬೈಯುತ್ತಾ ಸಾಮಾನುಗಳನ್ನು ಕಾರಿನಿಂದ ಇಳಿಸಿ ಒಳಗಿಡುತ್ತಿದ್ದರು. ರಾಮ ಸ್ವಾಮಿಗಳು "ನೀನೊಮ್ಮೆ ಸುಮ್ಮನಿರು..... ಅವಳು ನಮ್ಮ ಒಬ್ಬಳೇ ಮಗಳು ಅವಳ ಇಷ್ಟವೇ ಎಲ್ಲಾ ಅವಳುಗೇನು ಬೇಕೋ ಅದನ್ನು ಕೊಡಬೇಕು. ಬೇರೆ ಯಾರು ಬೇಕು ಬೇಡಗಳನ್ನು ಪೂರೈಸುವ ಅವಕಾಶ ನಮಗಿದೆ ?" ಎಂದಾಗ ಸುಮ್ಮನಾದರು ಇದರ ಪರಿವೇ ಇಲ್ಲದ ತನುಷ ಸಂತೋಷದಿಂದ ಆ ಮನೆಗೆ ಕಾಲಿಟ್ಟಳು. ಮನೆಯ ಎಲ್ಲಾ ಮೂಲೆ ಮೂಲೆಗಳಿಗೂ ಹೋಗಿ ನೋಡಿದಳು.ಏನೋ ಒಂದು ಆನಂದ ಎಲ್ಲ ಪರಿಶೋದಿಸಿ ಒಂದು ತಂದೆಯಲ್ಲ"ಪಪ್ಪಾ... ಸುಪ್ಪರ್ ಮನೆ... ನನಗಿಷ್ಟವಾಯಿತು.. ನಿಮಗೆ ಹೇಗೆ ?" ಅವರು ಸುಮ್ಮನೆ ನಕ್ಕು ಬೇರೇನೋ ಚಿಂತಿಸುತ್ತಿದ್ದರು. ಅವಳು ಮೇಲೆ ತನ್ನ ಕೋಣೆಗೆ ಹೋಗಿ ಹೊರ ನೋಡುತ್ತಾ ಕುಳಿತಳು.

ಪದ್ಮಮ್ಮ ಮಧ್ಯಾಹ್ನದೂಟದ ತಯಾರಿಗೆ ಕೆಲಸದಾಳುಗಳಿಗೆ ನಿರ್ದೇಶ ಕೊಡುತ್ತಿದ್ದರು. ರಾಮ ಸ್ವಾಮಿಗಳು ಹೊರಗೆ ಏನೋ ಲೆಕ್ಕಾಚಾರ ಮಾಡುತ್ತಾ ಇದ್ದರು. ಅಷ್ಟರಲ್ಲಿ ಸ್ವಾಮಿಗಳಿಗೆ ಫೋನ್ ಬರುತ್ತದೆ. "ಹಲೋ ಏನು ? ".. ಅಲ್ಲಿಂದ ಬಂದ ಧ್ವನಿಯಿಂದ ಅವರು ಸ್ತಬ್ಧರಾಗುತ್ತಾರೆ. ಜೀವಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದ ಅವರ ತಾಯಿ ತೀರಿದ ಸುದ್ದಿ..... "ಪದ್ಮಾ...ನೀರೂ...." ಎಂದು ಕೂಗುತ್ತಾರೆ. ಅವರ ಬೊಬ್ಬೆಗೆ ಎಲ್ಲರೂ ಓಡಿ ಬರ್ತಾರೆ. ಅವರನ್ನು ಸಮಾಧಾನ ಪಡಿಸಿ ಪದ್ಮಮ್ಮ ಅಲ್ಲಿಗೆ ಹೊರಡುವ ತಯಾರಿ ಮಾಡ್ತಾರೆ. ತನುಷಾ ಹೊರಡಲು ತಯಾರಿಯಾಗುತ್ತಾಳೆ. ಆದರೆ ಅವಳಿಗೆ ಏನೋ ಹೋಗ್ಬೇಡ ಅಂತ ಅನಿಸುತ್ತದೆ."ಅಮ್ಮ ನಾನು ಬರುವುದಿಲ್ಲ. ನೀನೂ ಅಪ್ಪನೂ ಹೋಗಿ ಬನ್ನಿ...."ಯಾಕೋ ಪದ್ಮಮ್ಮನೂ ಅವಳನ್ನು ಒತ್ತಾಯಿಸಲ್ಲಿಲ್ಲ. "ಆಯಿತು... ನೀನು ಬಂದರೆ ಹೆದರಬಹುದು. ಕೆಲಸದವಳು ಇದ್ತಾಳಲ್ಲ..." ಅವರಿಬ್ಬರು ಹೊರಟು ಹೋದರು.ಮನೆಯಲ್ಲಿ ತನುಷಳೂ ಒಬ್ಬಳು ಕೆಲಸದಾಳುವೂ ಇದ್ದಳು. ಹೊರಡುವಾಗ ಪದ್ಮಮ್ಮ ರಾತ್ರಿ ಬರುತ್ತೇವೆ ಎಂದು ಹೇಳಿದ್ದಳು. ಆದರೆ ಏನೋ ಕಾರಣ ಅವರಿಗೆ ಬರಲಾಗಲಿಲ್ಲ.

ರಾತ್ರಿ ಅತೀ ಸೆಖೆಯಿರುವುದರಿಂದ ತನುಷಾ ಪರಾಂಡದಲ್ಲಿ ಕುಳಿತು ಸುತ್ತಲೂ ವೀಕ್ಷಿಸುತ್ತಿದ್ದಳು. ಕೆಲಸದಾಳು ಊಟಕ್ಕೆ ಕರೆದಾಗ ಒಳಗೋಗಿ ಊಟ ಮಾಡಿದಳು. "ತನುಷಾ...ನನಗೆ ಮನೆಗೆ ಹೋಗಲು ಇತ್ತು. ಹೇಗೂ ನಿನ್ನ ಅಪ್ಪ ಅಮ್ಮ ಬರ್ತಾರಲ್ಲಾ... ನಾನು..." "ಆಯಿತು ನನಗೇನೂ ಭಯವಿಲ್ಲ... ನಾನೊಬ್ಬಳೇ ನಿಲ್ಲಬಲ್ಲೆ.. ನಿನಗೊತ್ತಿಲ್ಲ ನನ್ನನ್ನು... ಹೆಣ್ಣನ್ನು ಕೆಣಕುವ,

ಹೆಣ್ಣನ್ನು ಅಬಲೆಯೆಂದು ತಿಳಿದು ಅವಳನ್ನು ಬಲೆಗೆ ಬೀಳಿಸಲು ನೋಡುವ ನರ ರಾಕ್ಷಸರನ್ನು ಕೊಲ್ಲ ಸಬಲೆ ನಾನು..."ಅವಳು ನಕ್ಕು ಹೋದಳು.

ತನುಷಾ ಬಾಗಿಲು ಮುಚ್ಚಿ ತನ್ನ ಕೋಣೆಗೆ ಹೋದಳು. ಜೋರಾಗಿ ಗಾಳಿ ಬೀಸ ತೊಡಗಿತು. ಎಲ್ಲ ಕಿಟಕಿಗಳನ್ನು ಮುಚ್ಚಿ ಬೆಡ್ ನಲ್ಲಿ ಕುಳಿತಾಗ ಯಾರೋ ಕರೆದ ಹಾಗಾಯಿತು.... ಇಡೀ ನೋಡಿದಳು ಯಾರೂ ಕಾಣಲಿಲ್ಲ. "ತನೂ.... ಬಾ...."  "who are you.." ಎಂದು ಕೇಳಿದಳು... ಅವಳಿಗೇನೋ ಭಯ ಶುರುವಾಯಿತು. ಇದುವರೆಗೂ ಯಾರ ಮುಂದೆಯೂ ತಲೆ ತಗ್ಗಿಸದ ಗಂಡೆದೆಯ ಅವಳು ಭಯದಿಂದ ಮುದುಡಿ ಹೋದಳು. ಮುಚ್ಚಿದ್ದ ಕಿಟಕಿಗಳು ತೆರೆಯಿತು. ಜೋರಾಗಿ ಬೀಸುವ ಗಾಳಿಯಿಂದ ದೂಳೆಲ್ಲಾ ಒಳಗೆ ಬಂತು. ಯಾವುದೋ ಹೆಣ್ಣು ನಡೆಯುತ್ತಿರುವುದಾಗಿ ಕಂಡಿತು. ಜೋರಾಗಿ ಕೂಗುವ ಪ್ರಾಣಿಗಳ ಶಬ್ದದ ಮಿಶ್ರಣದಿಂದ ಕಿವಿ ಮುಚ್ಚಿ ಜೋರಾಗಿ ಬೊಬ್ಬೆ ಹಾಕಿದಳು. ಕೋಣೆಯೊಳಗಿನ ಎಲ್ಲಾ ವಸ್ತುಗಳೂ ಚೆಲ್ಲಾ ಪಿಲ್ಲಿಯಾಗಿ ಬಿತ್ತು. ಎಲ್ಲವೂ ಹಾರತೊಡಗಿತ್ತು. ಕರೆಂಟೂ ಹೋಯಿತು. ದೀಪ ಹೊತ್ತಿಸಲಿರುವ ಧೈರ್ಯ ಅವಳಿಗಿರಲ್ಲಿಲ್ಲ. ಆ ಮನುಷ್ಯಕೃತಿ  ಹತ್ತಿರವಾಗ ತೊಡಗಿತು. ಬಿಳಿ ಸಾರಿ ಹಾಕಿದ್ದ ಆ ಹೆಣ್ಣು ಮುಖ ತೋರಿಸದೆ ಆಚೆ ತಿರುಗಿ ನಿಂತಿದ್ದಳು. ಎಷ್ಟು ಪ್ರಯತ್ನಿಸಿದರೂ ಯಾರು ಎಂದು ಕೇಳುವ ಧೈರ್ಯ ಬರಲಿಲ್ಲ. ಕೊನೆಗೆ ತನ್ನ ಎಲ್ಲ ಶಕ್ತಿಯನ್ನು ಒಗ್ಗೂಡಿಸಿ "ಯಾರು ?ನೀನು... ಯಾ... ರು... ನ..ನ್ನ... ಯಾಕೆ... ಹೆ..ದ...ರಿಸುತ್ತಿ ?" ಎಂದು ಅಳು ಧ್ವನಿಯಲ್ಲಿ ಕೇಳಿದಳು. ಆ ಹೆಣ್ಣು ಅಳ ತೊಡಗಿದಳು... ತನುಷಾಳ ಭಯ ಇಳಿಯ ತೊಡಗಿತು. "ಯಾಕೆ... ಏನಾಯಿತು.. ನೀನುಯ ಯಾರು.." "ನಿನಗೆ ನಿಜವಾಗಿಯೂ ನನ್ನ ನೆನಪಿಲ್ವೇ.."ಎಂದು ಕೇಳಿ ತಿರುಗಿದಳು ತನುಷಾ ಬೆಚ್ಚಿ ಬಿದ್ದಳು. "ನೀನೂ.. ನೀ..ನು.. ಏನು ಇಲ್ಲಿ..?" ಹೌದು ತನುಷಾಳ ಪ್ರಾಣ ಸ್ನೇಹಿತೆ ಅಲೀನಾ ಆಗಿದ್ದಳು ಅವಳು ವರ್ಷಗಳ ಹಿಂದಿನ ನೆನಪು ಅವಳಿಗೆ ಬಂತು ...

ಅಂದು ಅಲೀನಾಳ 15 ವರ್ಷದ ಹುಟ್ಟಿದ ಹಬ್ಬ... ಸುಂದರವಾದ ಅಂಗಿ ಧರಿಸಿ ಸಂತೋಷದಿಂದ ಕಾರಿನಿಂದ ಇಳಿದು ಶಾಲೆಗೆ ಬಂದ ಅಲೀನಾಳನ್ನು ಮೊದಲು ವಿಷ್ ಮಾಡಿದ್ದು ತನುಷಾ... ಅವರಿಬ್ಬರೂ ಜೊತೆಯಾಗಿ ಎಲ್ಲಾ ತರಗತಿಗೂ ಸಿಹಿ ವಿತರಿಸಿದರು. ಹಾಗೆ ಆ ದಿನ ಸಂಜೆ ಇಬ್ಬರೂ ಜೊತೆಯಾಗಿ ಅಂಗಡಿಯ ಬಳಿ ನಿಂತು ನಗುತ್ತಾ ಹರಟುತ್ತಿದ್ದಾಗ ಅಲ್ಲಿಗೆ ಒಬ್ಬ ಬಂದ.. ಕೈಯಲ್ಲೂ ಕುತ್ತಿಗೆಯಲ್ಲೂ ಚೈನು ಧರಿಸಿ ಕಪ್ಪಗಿದ್ದ ಅವನ ರೂಪವೇ ಅಸಹ್ಯವಾಗುತ್ತಿತ್ತು. "ಏಯ್ ಅಪ್ಸರೇ.. ಹ್ಯಾಪಿ ಬರ್ತ್ ಡೇ ಟು ಯು.."ಎಂದು ಗುಲಾಬಿ ಕೊಟ್ಟ... ಅಲೀನಾ ಗುಲಾಬಿ ತೆಗೆದು ಕಾಲಿನಿಂದ ಬಗೆದು "ಥೂ... ಕುರೂಪಿ.. ನಿನ್ನ ರೂಪ ಕಂಡರೆ .. ನಿನ್ನ ಬಳಿ ಯಾರಾದರೂ ಬರುವರೇ. ರೂಪ ಇಲ್ಲದಿದ್ದರೂ ಗುಣವಾದರೂ ಇದೆಯೇ ?" ಎಂದು ಗಟ್ಟಿಯಾಗಿ ಬೈದು ಸೀದಾ ಅಲ್ಲಿಂದ ಹೊರಟು ಹೋದಳು. ತನುಷಾಳೂ ಹೋದಳು. ಆದರೆ ಆ ದಿನ ಕಳೆದು ಮರುದಿನ ಸೂರ್ಯ

ಉದಿಸುವಾಗ ಕೆಟ್ಟ ಸುದ್ದಿ ತಂದಿದ್ದ ಅಲೀನಾ ಇಲ್ಲ... ಎಲ್ಲಿ.. ಹೇಗೆ.. ಏನು... ಎಂದು ಯಾರಿಗೂ ಗೊತ್ತಿಲ್ಲಾ. ತನುಷಾ ಅಂದು ಆ ಊರಿಂದ ಹೋದವಳು ನಿನ್ನೆಯಷ್ಟೇ ಕಾಲಿಟ್ಟಿದ್ದಳು. ಅವಳು ತಂಗಿದ್ದ ಮನೆ ಆ ಪೋರನದ್ದಾಗಿತ್ತು. ಆ ದಿನ ಅಲೀನಾಳನ್ನು ಅವನು ಅವಳ ಮನೆಯಿಂದ ಅಪಹರಿಸಿ ಆ ದ್ವೇಷದಲ್ಲಿ ಕೊಂದೇ ಹಾಕಿದ್ದೆ. ಶವವನ್ನು ಮನೆಯ ಮುಂದಿನ ಕೊಳದಲ್ಲಿ ಬಿಸಾಡಿ ಪರಾರಿಯಾಗಿದ್ದ.

ಇಷ್ಟು ಹೇಳಿ ಅಲೀನಾ ಅಳ ತೊಡಗಿದಳು... “ತನೂ.. ನಿನಗೆ ಮಾತ್ರ ಸಾಧ್ಯ ಅದು ... ಕಾರಣ ನಿನಗೆ ಗೊತ್ತಿದೆ. ಇಂದಿನ ಈ ಲೋಕದಲ್ಲಿ ಹೆಣ್ಣನ್ನು ಸರಿಯಾಗಿ ಕಾಣುವ ಅವಳ ಮಾನಸಿಕ ಸ್ಥಿತಿ ತಿಳಿಯುವ ಹೆಣ್ಣನ್ನು ಯಾಕೆ ಸಮಾಜ ಆಗೌರವದಿಂದ ಕಾಣುತ್ತದೆ ಎಂದು ನಿನಗೆ ಮಾತ್ರ ತಿಳಿದಿದೆ.. ಪ್ಲೀಸ್...” “ಅಲೀನಾ .. ನಿನಗಾಗಿ ನಾನೇನು ಬೇಕಾದರೂ ಮಾಡುವೆ... ಹೇಳು ಏನು ಮಾಡಬೇಕು ?” ಅಲೀನಾ ನಕ್ಕು ಅವಳ ಹತ್ತಿರ ಬಂದು ಅವಳ ಶರೀರಕ್ಕೆ ಸೇರಿ ಕೊಂಡಳು. ಆಮೇಲೆ ಏನು ನಡೆಯಿತೆಂದು ತನುಷಾಳಿಗೂ ಗೊತ್ತಿಲ್ಲ. ಮರುದಿನ ಮಾತ್ರ ಖ್ಯಾತ ಕಾಡಿ ರಾಜ್ ಕುಮಾರ್ ನ ಶವ ಅಲೀನಾ ಶವವಿದ್ದ ಕೊಳದ ಪಕ್ಕ ಬಿದ್ದಿತ್ತು . ತನುಷಾ ಎಂದಿನಂತೆ ಇದ್ದಳು. ಮಾತ್ರವಲ್ಲ ಆ ಮನೆ ಖಾಲಿ ಮಾಡಿಸಿ ಹೋರಟು ಹೋದಳು. ಈಗ ತಿಳಿಯಿತು ತನುಷಾಳಿಗೂ ಯಾವ ಶಕ್ತಿ ತನ್ನನ್ನು ಇಲ್ಲಿಗೆ ಸೆಳೆಯಿತು. ಕಾರಿಗೆ ಹತ್ತಿ ಮನೆ ಕಡೆ ನೋಡಿದಾಗ ಮನೆಯ ಮೇಲೆ ಅಲೀನಾ ನಗುತ್ತಿರುವಂತೆ ಕಂಡಿತು. ತನುಷಾಳ ಮುಖದಲ್ಲಿ ತಿಳಿನಗೆ ಮೂಡಿತ್ತು.

ಹೆಣ್ಣನ್ನು ಅಬಲೆಯಂತೆ ಕಾಣುವ ಸಮಾಜ ಅವಳ ನೋವುಗಳಿಗೆ ಸ್ಪಂದಿಸದೆ ಅವಳನ್ನು ಕೇವಲವಾಗಿ ಕಾಣುತ್ತದೆ. ಅದುವೇ ಇಂದು ಹೆಚ್ಚುತ್ತಿರುವ ಅತ್ಯಾಚಾರಕ್ಕೆ ಕಾರಣ.

ರಚನೆ:– ಕದೀಜತ್ ತ್ರಸ್ರೀಹ .ಎ

# ಮಳೆ

ಮಳೆಗಾಲ ಬಂದಿತು
ನದಿಕೆರೆಗಳು ತುಂಬಿತು
ಮರಗಿಡಗಳು ಚಿಗುರುತ್ತಾ
ಮಾವು, ಹಲಸಿನ ಮಿಡಿಯಾಯಿತು

ಕೋಗಿಲೆ ತಮ್ಮ ಮಧುರ ಕಂಠದಿಂದ ಹಾಡುತ್ತವೆ
ನವಿಲುಗಳು ಗರಿಬಿಚ್ಚಿ ಕುಣಿಯುತ್ತವೆ
ಮಳೆ ಬರುವ ಆ ಕ್ಷಣವನ್ನು
ಪಕ್ಷಿಗಳು ಖುಷಿಯಿಂದ ಸ್ವಾಗತಿಸುತ್ತವೆ
ಮೋಡ ಕವಿದು ಕತ್ತಲಾಗಿ
ಗಾಳಿ ಬೀಸಿ ತಂಪಾಗಿ
ಮನಸಿಗೆಲ್ಲಾ ಮದನೀಡುವ
ಮಳೆ ಬಂತು ಮಳೆ

ರಚನೆ,
ಮನೋಜ್,ಆ ಎ


Shravan . M.S VIII B


ತಸ್ರೀನ.ಬಿ


I

***thank you***